**ಮಕ್ಕಳದಿನ ವಿಶೇಷ**

# ಮಕ್ಕಳಿಸ್ಕೂಲು ಜಾನಪದದಲ್ಲಲ್ವೇ?



**ಎಸ್.ಜಿ. ಸಿದ್ಧರಾಮಯ್ಯ**

ಮಕ್ಕಳ ಲೋಕವನ್ನು ಉಜ್ವಲಗೊಳಿಸುವ ಪಾಲಕರು ಹಾಗೂ ಸಾಹಿತಿಗಳು ಮೊದಲು ಗಮನಿಸಬೇಕಾದುದು ಹಿರಿಯರ ಬಾಳುವೆಯನ್ನು. ಅಜ್ಜಅಜ್ಜಿಯರು ಹಾಗೂ ಎಳೆಯರ ನಡುವಿನ ನಂಟನ್ನು ಗಮನಿಸಿದರೆ, ಮಕ್ಕಳಿಗೆ ಬೇಕಾದುದೇನು ಎನ್ನುವುದು ಹೊಳೆಯುತ್ತದೆ. ಆ ಲೋಕಜ್ಞಾನ ದೊಡ್ಡವರ ಬದುಕನ್ನೂ ಬೆಳಗಿಸುವಂತಹದ್ದು.

ಮಕ್ಕಳ ಸಾಹಿತ್ಯ ಎಂಬ ವಿಶಿಷ್ಟ ಪ್ರಕಾರವನ್ನು ಕುರಿತು ನಮ್ಮಲ್ಲಿ ಇನ್ನೂ ಗಂಭೀರ ಚಿಂತನೆ ನಡೆದಿಲ್ಲ. ನವೋದಯ ಕಾಲದ ಕವಿಗಳು ಮಕ್ಕಳ ಸಾಹಿತ್ಯಕ್ಕೆ ಗಮನಹರಿಸಿದಷ್ಟು ನವ್ಯದ ಕವಿಗಳು ಗಮನಹರಿಸಲಿಲ್ಲ. ಅಷ್ಟೇ ಅಲ್ಲ, ಮಕ್ಕಳ ಕವಿತೆ ರಚನೆ ಮಾಡುವವರ ಬಗೆಗೆ ಒಂದು ಬಗೆಯ ಉಪೇಕ್ಷೆ ತೋರಿದ್ದು ಕೂಡ ಕಠೋರ ವಾಸ್ತವ. ಹೀಗಾಗಿ ಮಕ್ಕಳ ಸಾಹಿತ್ಯವೆಂದರೆ ಈಗಲೂ ನಮಗೆ ನವೋದಯ ಕಾಲದ ಕವಿಗಳೇ ಆದಿ ಮತ್ತು ಆದರ್ಶ. ಇಷ್ಟಾಗಿಯೂ ಕೆಲವರು ಈ ಪ್ರಕಾರದ ಬಗ್ಗೆ ಹೆಚ್ಚಿನ ಒಲವನ್ನು ತೋರಿಸುತ್ತಾ ಪ್ರಯೋಗಶೀಲರಾಗಿರುವುದು ಆಶಾದಾಯಕ ವಿಚಾರ. ಇಂಥ ಪ್ರಯೋಗಶೀಲರಲ್ಲಿ ಬಹುತೇಕರು ದಪ್ಪ ಅಕ್ಷರದಲ್ಲಿ ಕವಿತೆ–ಕಥೆಗಳನ್ನು ಅಚ್ಚುಹಾಕಿಸಿ ಇದು ಮಕ್ಕಳ ಸಾಹಿತ್ಯ ಎಂದು ತೋರಿಸುವವರು. ಅಂಥ ಬರಹಗಳಲ್ಲಿ ಮಕ್ಕಳ ಮನೋಧರ್ಮಕ್ಕೆ ಒಗ್ಗದ ಪದ ಪ್ರಯೋಗ ಅವರ ಮುಗ್ಧತೆಗೆ ಹೊರೆಯಾಗುವ ವಿಚಾರಭಾರಗಳೇ ಹೆಚ್ಚು. ಅಂಥ ರಚನೆಗಳು ನಿಷ್ಪ್ರಯೋಜಕಗಳೇ ಸರಿ. ಏಕೆಂದರೆ ಅವು ಸಿದ್ಧಾಂತದ ರಚನೆಗಳು. ಇಂಥ ರಚನೆಗಳೇ ಹೆಚ್ಚಾಗಿ ಬರುತ್ತಿರುವ ಈ ಹೊತ್ತಿನಲ್ಲಿ ನಮ್ಮನ್ನು ಮತ್ತೆ ಮತ್ತೆ ಕಾಡಿಸುವ 'ಬಣ್ಣದ ತಗಡಿನ ತುತ್ತೂರಿ', 'ಬೆಕ್ಕೇ ಬೆಕ್ಕೆ ಮುದ್ದಿನ ಸೊಕ್ಕೆ', 'ದೇವರ ಪೆಪ್ಪರಮೆಂಟೇನಮ್ಮ ಗಗನದಿ ಹೊಳೆಯುವ ಚಂದಿರನು' ಇಂಥ ಸರಳ ಸುಂದರ ರಚನೆಗಳು ನೆನಪಾಗುವುದು ಸಹಜ.

ಮಕ್ಕಳ ಸಾಹಿತ್ಯವನ್ನು ಕುರಿತು ಮಾತನಾಡುವಾಗಲೂ ನಮ್ಮ ವಿಮರ್ಶಕರು ಯಥಾಪ್ರಕಾರದಲ್ಲಿ ಅದು ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದ ಮೊದಲು ಅನುವಾದ ರೂಪದಲ್ಲಿ, ನಂತರ ಸ್ವತಂತ್ರ ರಚನೆಯಾಗಿ ಕನ್ನಡ ಸಾಹಿತ್ಯದಲ್ಲಿ